ದಿನಾಂಕ 03.11.2022ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದಃ-

2. 2015ರಲ್ಲಿ ನಾನು ಗಂಧದಕಡ್ಡಿ ಕೆಲಸಕ್ಕೆ ಹೋಗುತ್ತಿದ್ದೆ. ನನ್ನ ಮನೆ ಪುಲಕೇಶಿ ರಸ್ತೆಯಲ್ಲಿದೆ. ಮೃತ ಪವಿತ್ರಾಕುಮಾರಿ ಪರಿಚಯ ಇತ್ತು. ಮೃತಳ ಮನೆ ಬೇರೆ ರಸ್ತೆಯಲ್ಲಿದೆ. ಮೃತ ಪವಿತ್ರಾಕುಮಾರಿ ಏನೇನು ವ್ಯವಹಾರ ಮಾಡುತ್ತಿದ್ದಳು ಎನ್ನುವುದು ನನಗೆ ಖುದ್ದಾಗಿ ಗೊತ್ತಿಲ್ಲ. ಆರೋಪಿ ಮೃತಳ ಮನೆಯ ಹತ್ತಿರ ವಾಸ ಇದ್ದಳು. ನನ್ನ ಮನೆ ಮತ್ತು ಮೃತಳ ಮನೆಯ ನಡುವೆ ಇರುವ ಅಂತರ ಹೇಳಲು ಆಗುವುದಿಲ್ಲ. ಅದು ಸ್ವಲ್ಪ ದೂರ ಇದೆ. ಮೃತಳ ಮನೆಯ ಅಕ್ಕಪಕ್ಕದಲ್ಲಿ ಇತರೆ ವಾಸದ ಮನೆಗಳು ಇವೆ. ಶರೀಫ, ಸುಂದರರಾಜ್ ಎನ್ನುವವರು ಅಲ್ಲಿ ವಾಸ ಇದ್ದಾರೆ. ಆರೋಪಿ ಮತ್ತು ಮೃತಳ ನಡುವೆ ಇದ್ದ ಹಣಕಾಸಿನ ವಿಚಾರಗಳು ನನಗೆ ಖುದ್ದಾಗಿ ಗೊತ್ತಿಲ್ಲ. ಮೃತಳು ಆರೋಪಿಗೆ ಎಷ್ಟು ಹಣ ಕೊಡಬೇಕಾಗಿತ್ತು ಅಂತ ಗೊತ್ತಿಲ್ಲ.

3. ಮೃತಳು ಕುಡಿಯುವ ನೀರು ತೆಗೆದುಕೊಂಡು ಹೋಗಲು ನಮ್ಮ ಮನೆಯ ಬಳಿ ಬರುತ್ತಿದ್ದಾಗ ಪರಿಚಯ ಆಗಿದ್ದಳು. ದಿನಾಂಕ 07.06.2015ರಂದು ಗಲಾಟೆ ಆಗಿತ್ತು. ನನಗೆ ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಪೊಲೀಸರು ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಅಂತ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಆರೋಪಿ ಮೃತಳ ಮನೆಯ ಬಳಿ ಹೋಗಿಲ್ಲ ಎನ್ನುವುದು, ಅಲ್ಲಿ ಯಾವುದೇ ಗಲಾಟೆ ಮಾಡಿರಲಿಲ್ಲ ಎನ್ನುವುದು, ನಾನು ಯಾವುದೇ ಗಲಾಟೆಯನ್ನು ನೋಡಿರಲಿಲ್ಲ ಎನ್ನುವುದು ಸರಿಯಲ್ಲ. ಮೃತಳ ಮನೆಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**03.11.2022.**

**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**